ಓ ಎಸ್ ನಂ.41/2022
ಡಿ.ಡಬ್ಲ್ಯೂ-1 ಈರಣ್ಣ ತಂದೆ ಅಣ್ಣರಾವ್ ಪಾಟೀಲ್

**(ಇಂದು ದಿನಾಂಕಃ 17-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ನಾನು ಆಕ್ಷೇಪಣೆ ರಹಿತ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೧ ಎಂದು ಗುರುತಿಸಲಾಯಿತು.

ನಾನು ವಿಭಾಗ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-೨ ಎಂದು ಗುರುತಿಸಲಾಯಿತು.

ಸಾಕ್ಷಿ ನಿಡಿ-೨ ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-೨ [ಎ] ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಶ್ರೀ ಎಸ್ ಜೆ ಜಿ ವಕೀಲರಿಂದ.

ವಾದಿ ನಿಡಿ-೧ ರಲ್ಲಿ ವಾದಿಯ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಸಹಿ ನೋಟರಿ ಪುಸ್ತಕದಲ್ಲೂ ಇಲ್ಲ ಎಂದರೆ ಸರಿಯಲ್ಲ. ನಿಡಿ-೧ ನ್ನು ಗಾಣಗಾಪೂರದ ಶರತ ಪೂಜಾರಿ ನೋಟರಿರವರ ಹತ್ತಿರ ನೋಟರಿ ಮಾಡಲಾಗಿರುತ್ತದೆ. ವಾದಿ ಗಾಣಗಾಪೂರಕ್ಕೆ ಬಂದಿರಲಿಲ್ಲ ಮತ್ತು ನಿಡಿ-೧ ಕ್ಕೆ ಯಾವುದೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ-೨ ವಿಭಾಗ ಪತ್ರವನ್ನು ನಮ್ಮ ತಂದೆ ಮಾಡಿಕೊಟ್ಟಿರುವುದಿಲ್ಲ, ಅದನ್ನು ನಾನೇ ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-೨ ಕ್ಕೆ ನಮ್ಮ ತಂದೆಯ ಮತ್ತು ವಾದಿಯ ಸಹಿ ಇರುವುದಿಲ್ಲ, ಅದನ್ನು ನಾನೇ ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.